ಸ್ಥಾಪನೆ : 1955 ॥ ಓಂ ಶ್ರೀ ಗಣೇಶಾಯ ನಮಃ ॥ ಫೋನ್ : 080-2676 4081

# ಶ್ರೀ ಗಣೇಶ ಮಂದಿರಂ (ರಿ)

ತ್ಯಾಗರಾಜನಗರ, ಬೆಂಗಳೂರು – 560 028.

ವಿನಾಯಕ ಗಣಾಧೀಶ । ಸರ್ವದೇವ ನಮಸ್ಕೃತ ।
ಪಾರ್ವತಿಪ್ರಿಯ ವಿಘ್ನೇಶ । ಮಮ ವಿಘ್ನಂ ನಿವಾರಯ ।

## ಶ್ರೀ ಗಣೇಶೋತ್ಸವಾಹ್ವಾನ ಪತ್ರಿಕಾ
## (70ನೇ ವರ್ಷದ ಉತ್ಸವ)

ಭಕ್ತಾದಿಗಳೆಲ್ಲರಿಗೂ ತಿಳಿದಿರುವಂತೆ ಶ್ರೀ ಗಣೇಶ ಮಂದಿರದಲ್ಲಿ ಪ್ರತಿ ವರ್ಷವೂ ಭಾದ್ರಪದ ಶುದ್ಧ ಚತುರ್ಥಿಯಿಂದ ಭಾದ್ರಪದ ಶುದ್ಧ ಚತುರ್ದಶಿಯ ವರೆಗೆ ಹತ್ತು ದಿನಗಳ ಕಾಲ ಶ್ರೀ ಗಣೇಶೋತ್ಸವವನ್ನು ಆಚರಿಸಲಾಗುತ್ತಿದೆ. ಆ ಸಮಯದಲ್ಲಿ ಪ್ರತಿ ದಿನ ಪ್ರಾತಃಕಾಲ ಅಭಿಷೇಕ ಅರ್ಚನೆಗಳನ್ನು ಸಂಜೆ ವಿಶೇಷ ಅಲಂಕಾರಗಳನ್ನು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಪ್ರಸ್ತುತ ಕಳೆದೆರಡು ವರ್ಷಗಳಲ್ಲಿ ಅಖಂಡ ಭಾರತದಲ್ಲೇ ಅಲ್ಲದೆ ಇಡೀ ಪ್ರಪಂಚದಲ್ಲಿ ಹರಡಿದ್ದಂತಹ ಕೊರೋನಾ ಎಂಬ ವೈರಾಣುವಿನ ಸೋಂಕಿನಿಂದ ಸಮಸ್ತ ಮಾನವರು ಹಾಗು ಸರ್ಕಾರವೂ ಕೂಡ ಈ ಸೋಂಕಿನ ನಿವಾರಣೆಗಾಗಿ ಬಹಳಷ್ಟು ಶ್ರಮಪಟ್ಟು ಒಂದು ತರಹ ಹತೋಟಿಗೆ ತರುವಲ್ಲಿ ಯಶಸ್ವಿಯಾಗಿದ್ದಾರೆ. ದೇವಸ್ಥಾನಗಳಲ್ಲಿಯೂ ಸಹ ಕಟ್ಟುನಿಟ್ಟಿನ ಕ್ರಮ ಅನುಸರಿಸಲು ಸೂಚಿಸಿದ್ದು ನಮ್ಮ ಮಂದಿರದಲ್ಲಿಯೂ ಸಹ ಎಲ್ಲ ನಿಬಂಧನೆಗಳನ್ನು ಪಾಲಿಸಿರುತ್ತೇವೆ. ಹಾಗಾಗಿ ಕಳೆದ ಎರಡು ವರ್ಷ ನಿಮ್ಮ ಮಂದಿರದಲ್ಲಿ ಗಣಪತಿ ಉತ್ಸವವನ್ನು ಸಾಧಾರಣ ರೀತಿಯಲ್ಲಿ ಹೆಚ್ಚು ಆಡಂಬರವಿಲ್ಲದೆ ರಥೋತ್ಸವವನ್ನು ಕೂಡ ನಡೆಸದೆ ಎಲ್ಲ ಕಾರ್ಯ ಕಲಾಪಗಳನ್ನು ಚಾಚೂ ತಪ್ಪದೆ ನಿಮ್ಮೆಲ್ಲರ ಸಹಕಾರದಿಂದ ನಡೆಸಿರುತ್ತೇವೆ.

ಈ ಬಾರಿ ಸೋಂಕಿನ ಹತೋಟಿಯಲ್ಲಿರುವ ಕಾರಣ ಹಾಗೂ ಸರ್ಕಾರದ ನಿಬಂಧನೆಗಳನ್ನು ಸಡಿಲಿಸಿರುವ ಕಾರಣ ಈ ವರ್ಷದ ಗಣೇಶೋತ್ಸವವನ್ನು ಎಂದಿನಂತೆ ನಡೆಸಲು ತೀರ್ಮಾನಿಸಿದೆ ಆದ ಕಾರಣ ಈ ವರ್ಷ ಮಕ್ಕಳ ಸ್ಪರ್ಧೆಗಳನನ್ನೂ ಸಹ ನಡೆಸಲಾಗುತ್ತದೆ ಆದಾಗ್ಯೂ ಕೊರೋನಾ ಮೂರನೆಯ ಅಲೆಯ ಮುನ್ಸೂಚನೆಯ ಕಾರಣ ಸರ್ಕಾರದ ಕೆಲವು ಅನಿವಾರ್ಯ ನಿಬಂಧನೆಗಳನ್ನು ಆಚರಿಸುತ್ತಾ ಈ ಬಾರಿ ಶ್ರೀ ಗಣೇಶ ಉತ್ಸವವನ್ನು ಶ್ರೀ ಶುಭಕೃತ್ ಸಂವತ್ಸರದ ಭಾದ್ರಪದ ಶುದ್ಧ ಚತುರ್ಥಿ ಬುಧವಾರ **31-08-2022** ರಿಂದ ಭಾದ್ರಪದ ಶುದ್ಧ ಚತುರ್ದಶಿ ಶುಕ್ರವಾರ **ತಾ॥ 09-09-2022** ರವರೆಗೆ ಆಚರಿಸಲು ಸಮಿತಿಯವರು ನಿರ್ಧರಿಸಿರುತ್ತಾರೆ. ಭಕ್ತಾದಿಗಳು ಸರ್ಕಾರದ ನಿಬಂಧನೆಗಳನ್ನು ಚಾಚೂ ತಪ್ಪದೇ ಪಾಲಿಸಿ ಸರ್ವರೂ ಉತ್ಸವ ಸಮಯದಲ್ಲಿ ಭಗವದ್ದರ್ಶನ ಪಡೆದು ಕಾರ್ಯಕ್ರಮಗಳಲ್ಲಿ ಸಕ್ರಿಯ ಭಾಗಿಗಳಾಗಿ ಎಂದಿನಂತೆ ತಮ್ಮ ತನು-ಮನ-ಧನ-ಸಹಕಾರ ನೀಡಿ ಸಹಕರಿಸಿ ಶ್ರೀ ಮಹಾಗಣಪತಿಯ ಕೃಪೆಗೆ ಪಾತ್ರರಾಗಬೇಕಾಗಿ ಪ್ರಾರ್ಥನೆ.

ತಾ॥ 09-08-2022

**ಶ್ರೀ ಗಣೇಶ ಮಂದಿರಂ**
**ಕಾರ್ಯಕಾರಿ ಸಮಿತಿ**

## SRI GANESHA MANDIRAM (R.)

Thyagaraja nagara, Bengaluru – 560 028.

# 70th Sri Ganesha Utsavam

**On Date : 31-08-2022 Wednesday to 09-09-2022 Friday**

Under the auspicious of the above Mandiram **Sri Ganesha Utsavam** will be celebrated from 31-08-2022 Wednesday to 09-09-2022 Friday. Your presence and co-operation are earnestly solicited. Any contribution, however small either in kind or in coin towards the laudable undertaking will be thankfully accepted.

॥ ಓಂ ಶ್ರೀ ಗಣೇಶಾಯ ನಮಃ ॥

ಓಂ **ಶ್ರೀ ಗಣೇಶ ಮಂದಿರಂ (ರಿ)** ಓಂ

ತ್ಯಾಗರಾಜನಗರ, ಬೆಂಗಳೂರು - 560 028.

# 70ನೇ ವರ್ಷದ ಶ್ರೀ ಗಣೇಶೋತ್ಸವ ಕಾರ್ಯಕ್ರಮಗಳು

**ದಿನಾಂಕ 31-08-2022 ಬುಧವಾರದಿಂದ 09-09-2022 ಶುಕ್ರವಾರ ಪೂರ್ತ**

ಪ್ರತಿದಿನ ಪ್ರಾತಃಕಾಲ ಮೂಲದೇವರಿಗೆ ಅಭಿಷೇಕ-ಅರ್ಚನೆಗಳು. ಸಂಜೆ ಮೂಲದೇವರಿಗೆ ವಿಶೇಷ ಅಲಂಕಾರಗಳು - ಸಹಸ್ರನಾಮಾರ್ಚನೆ ಭಕ್ತಾದಿಗಳು ಸಾಮಾಜಿಕ ಅಂತರದ ಸರದಿಯಲ್ಲಿ ನಿಂತು ದರ್ಶನ ಪಡೆಯಬಹುದು.

| | |
|---|---|
| ತಾ॥ 31-08-2022<br>ಬುಧವಾರ/ಚತುರ್ಥಿ | **ಬೆಳಗ್ಗೆ 10-00** ಗಂಟೆಗೆ **"ಉತ್ಸವ ಮೂರ್ತಿ ಪ್ರತಿಷ್ಠಾಪನೆ"**. ಮೃಣ್ಮಯ ಮೂರ್ತಿ ಪೂಜೆ<br>**ಸಂಜೆ 8-00** ಗಂಟೆಗೆ ಡಾ॥ ಸತ್ಯನಾರಾಯಣ ಭಟ್ ರವರಿಂದ **"ಶ್ಯಮಂತಕೋಪಾಖ್ಯಾನ"** ಪ್ರವಚನ |
| ತಾ॥ 01-09-2022<br>ಗುರುವಾರ/ಪಂಚಮಿ | **ಸಂಜೆ 6.30** ಗಂಟೆಗೆ ಮಕ್ಕಳ ಕಾರ್ಯಕ್ರಮ : 1-15 ವರ್ಷದವರಿಗೆ - **'ಗಣೇಶನ ಚಿತ್ರ ರಚನಾ ಸ್ಪರ್ಧೆ'**<br>**ಸಂಜೆ 7-00** ಗಂಟೆಗೆ ಕುಮಾರಿ ಚಿನ್ಮಯಿ ಸಿ. ಮದುಸೂಧನ್ ಮತ್ತು ವೃಂದದವರಿಂದ **'ಕರ್ನಾಟಕ ಶಾಸ್ತ್ರೀಯ ಸಂಗೀತ'** |
| ತಾ॥ 02-09-2022<br>ಶುಕ್ರವಾರ/ಷಷ್ಠಿ | **ಸಂಜೆ 6.30** ಗಂಟೆಗೆ **ಮಕ್ಕಳ ಸ್ಪರ್ಧೆಗಳು** 1 - 5 ವರ್ಷದವರಿಗೆ - **ಮಾರುವೇಷ ಸ್ಪರ್ಧೆ,**<br>1-15 ವರ್ಷದವರಿಗೆ - **ಗಣೇಶನ ಸ್ತೋತ್ರ / ಭಕ್ತಿ ಗೀತೆ ಸ್ಪರ್ಧೆ** |
| ತಾ॥ 03-09-2022<br>ಶನಿವಾರ/ಸಪ್ತಮಿ | **ಸಂಜೆ 7.00** ಗಂಟೆಗೆ **ಶ್ರೀಮತಿ ಶೃತಿ ಎಂ. ಐಯ್ಯರ್** ಮತ್ತು ಸಂಗಡಿಗರಿಂದ **ಮೋಹಿನಿಯಾಟ್ಟಂ ನೃತ್ಯ ಕಾರ್ಯಕ್ರಮ** |
| ತಾ॥ 04-09-2022<br>ಭಾನುವಾರ/ಅಷ್ಟಮಿ | **ಬೆಳಗ್ಗೆ 10:00** ಗಂಟೆಗೆ ಲೋಕ ಕಲ್ಯಾಣಾರ್ಥವಾಗಿ **ಶ್ರೀ ಮಹಾಗಣಪತಿ ಸಹಸ್ರ ಮೋದಕ ಹೋಮ - ಪೂರ್ಣಾಹುತಿ,** ಭಕ್ತಾದಿಗಳು ಹೋಮ ಸಂಕಲ್ಪದಲ್ಲಿ ಭಾಗವಹಿಸಿ ಹೋಮ ಪ್ರಸಾದ ಪಡೆಯಬಹುದು.<br>**ಸಂಜೆ 7:00** ಗಂಟೆಗೆ **ನಾಟ್ಯ ಪ್ರವೀಣೆ** ದಿ॥ ಕು. ಭಾನುಮತಿ ಮತ್ತು ಶ್ರೀಮತಿ ಶೀಲಚಂದ್ರಶೇಖರ್ ರವರ ಶಿಷ್ಯವೃಂದ ದವರಿಂದ **"ಭರತನಾಟ್ಯ ಮತ್ತು ದೇವಾಲಯ ನೃತ್ಯ"**. |
| ತಾ॥ 05-09-2022<br>ಸೋಮವಾರ/<br>ನವಮಿ-ದಶಮಿ | **ಸಂಜೆ 7:00** ಗಂಟೆಗೆ **ವಿದುಷಿ ಶ್ರೀಮತಿ ನಂದಿನಿ ವಿಜಯ ವಿಠ್ಠಲ** ಮತ್ತು ಸಂಗಡಿಗರಿಂದ (ಶ್ರೀ ವಿಜಯ ವಿಠ್ಠಲ ಕಲಾ ಶಾಲೆ, ಹನುಮಂತನಗರ) **"ದೇವರನಾಮ-ಸಂಗೀತ ಕಾರ್ಯಕ್ರಮ"** |
| ತಾ॥ 06-09-2022<br>ಮಂಗಳವಾರ/ಏಕಾದಶಿ | **ಬೆಳಗ್ಗೆ 10.00** ಗಂಟೆಗೆ **ಸಹಸ್ರನಾಮ ದೀಪ ಪೂಜಾ-ಅರ್ಚನೆ** (ಸುಮಂಗಲಿಯರಿಂದ)<br>**ಸಂಜೆ 7:00** ಗಂಟೆಗೆ **ವಿದ್ವಾನ್ ಅನಂತ್ ಭಾಗವತ್** ಮತ್ತು ಸಂಗಡಿಗರಿಂದ **"ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ"** |
| ತಾ॥ 07-09-2022<br>ಬುಧವಾರ/ದ್ವಾದಶಿ | **ಸಂಜೆ 7.00** ಗಂಟೆಗೆ **ಶ್ರೀಮತಿ ವಿದುಷಿ ಜಯಲಕ್ಷ್ಮಿ ಎಸ್. ಭಟ್** ಮತ್ತು ಸಂಗಡಿಗರಿಂದ (ಅಮೃತವರ್ಷಿಣಿ ಸಂಗೀತ ಶಾಲೆ, ಗಿರಿನಗರ) **ಕರ್ನಾಟಕ ಶಾಸ್ತ್ರೀಯ ಸಂಗೀತ- ದೇವರ ನಾಮಗಳು** |
| ತಾ॥ 08-09-2022<br>ಗುರುವಾರ/ತ್ರಯೋದಶಿ | **ಸಂಜೆ 7.00** ಗಂಟೆಗೆ **ಕಲಾಶ್ರೀ ಕಲಾಯೋಗಿ ವಿದ್ವಾನ್ ಸಿ. ಮಧುಸೂದನ್** ಮತ್ತು ವೃಂದದವರಿಂದ (ಶ್ರೀ ಮಂಜುನಾಥ ಕಲಾ ಶಾಲೆ, ಪದ್ಮನಾಭ ನಗರ) **ವಯೋಲಿನ್ ವಾದನ** |
| ತಾ॥ 09-09-2022<br>ಶುಕ್ರವಾರ/ಚತುರ್ದಶಿ | **ಬೆಳಗ್ಗೆ 8:00** ಗಂಟೆಗೆ ಉತ್ಸವ ಮೂರ್ತಿಗೆ **"ಷೋಡಶೋಪಚಾರ ಪೂಜೆ - ಉದ್ವಾಸನೆ"**<br>**ಸಂಜೆ 6:00** ಗಂಟೆಗೆ ರಾಜಬೀದಿಯಲ್ಲಿ **"ರಥೋತ್ಸವ"** ಮೃಣ್ಮಯ ಮೂರ್ತಿ ವಿಸರ್ಜನೆ,ಪ್ರಸಾದ ವಿನಿಯೋಗ |

ಭಕ್ತಾದಿಗಳು ಪ್ರತಿದಿನದ ಅಭಿಷೇಕ ಅರ್ಚನಾದಿಗಳಲ್ಲಿ, ಅಲಂಕಾರ ಸೇವಾದಿಗಳಲ್ಲಿ, ಹೋಮ ಸಂಕಲ್ಪದಲ್ಲಿ, ಸಕ್ರಿಯ ಭಾಗಿಗಳಾಗಿ ಭಗವಂತನ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

## ಸಹಸ್ರನಾಮ ದೀಪ ಪೂಜೆ

ಸುಮಾರು ಹತ್ತು ವರ್ಷಗಳ ಹಿಂದೆ ಉತ್ಸವ ಸಮಯದಲ್ಲಿ ನಡೆಸುತ್ತಿದ್ದ **ಶ್ರೀ ಮಹಾಗಣಪತಿ ಸಹಸ್ರನಾಮ ದೀಪ ಪೂಜೆ**ಯನ್ನು ಸುಮಂಗಲಿಯರಿಗಾಗಿ ಈ ಬಾರಿ ಮತ್ತೆ ಪ್ರಾರಂಭ ಮಾಡಲಾಗಿದೆ. ಸುಮಂಗಲಿಯರು ಈ ಕಾರ್ಯಕ್ರಮದಲ್ಲಿಯೂ ಸಹ ಸಕ್ರಿಯ ಭಾಗವಹಿಸಿ ಭಗವಂತನ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ. ವಿವರಗಳಿಗೆ ಅರ್ಚಕರನ್ನು ಸಂಪರ್ಕಿಸಿ.

## ಸ್ವರ್ಣಗೌರಿ ವ್ರತ

ಸುಮಂಗಲಿಯರಿಗಾಗಿ ಮಂದಿರದ ಆವರಣದಲ್ಲಿ ಎಂದಿನಂತೆ ಭಾದ್ರಪದ ಶುದ್ಧ ತದಿಗೆ ಮಂಗಳವಾರ ತಾ|| **30-08-2022** ರಂದು ಸಾಮೂಹಿಕ ಸ್ವರ್ಣಗೌರಿ ವ್ರತ ಆಚರಣೆಯನ್ನು ಪ್ರಸಕ್ತ ಸಮಯದಲ್ಲಿ ಈ ಕೆಳಕಂಡಂತೆ ಏರ್ಪಡಿಸಲಾಗಿದೆ. ವ್ರತ ಪೂಜೆಯು **ಬೆಳಗ್ಗೆ 8-00** ಗಂಟೆಯಿಂದ ಪ್ರಾರಂಭವಾಗುವುದು.

1. ಒಂದು ತಂಡದ ಪೂಜೆಯ ನಂತರ ಮತ್ತೊಂದು ತಂಡದ ಪೂಜೆ ನಡೆಸಲಾಗುವುದು.
2. ಪೂಜೆಯಲ್ಲಿ ಭಾಗವಹಿಸುವವರು ಮುಂಚಿತವಾಗಿ ಯಾವ ತಂಡದಲ್ಲಿ ಭಾಗವಹಿಸುತ್ತಾರೆಂದು ತಿಳಿಸಬೇಕು.
3. ಪ್ರತಿಯೊಂದು ಪೂಜೆಗೂ ಮಂದಿರದ ಪೂಜಾ ಕಾಣಿಕೆಯಾಗಿ ರೂ. **25.00** ಸಂದಾಯ ಮಾಡಿ ರಶೀದಿ ಪಡೆಯಬೇಕು.
4. ಪ್ರತಿಯೊಬ್ಬರೂ ಮಾಸ್ಕ್ ಧರಿಸಿರಬೇಕು ಹಾಗೂ ಸಾಮಾಜಿಕ ಅಂತರ ಕಾಪಾಡಿಕೊಳ್ಳಬೇಕು.

## ಉತ್ಸವದ ಸಮಯದಲ್ಲಿ ಸೇವಾ ವಿವರಗಳು

| ಸಂ. | ಸೇವೆ | ಶುಲ್ಕ | ಸಂ. | ಸೇವೆ | ಶುಲ್ಕ |
|---|---|---|---|---|---|
| 1. | ಸಹಸ್ರನಾಮಾರ್ಚನೆ | ₹ 50/- | 6. | ಒಂದು ದಿನದ ಅಲಂಕಾರ ಕಾಣಿಕೆ (ಅಲಂಕಾರದ ವೆಚ್ಚ ಪ್ರತ್ಯೇಕ) | ₹ 250/- |
| 2. | ಸಹಸ್ರನಾಮ ದೀಪ ಪೂಜೆ | ₹ 100/- | | | |
| 3. | ಒಂದು ದಿನದ ಅಭಿಷೇಕ | ₹ 200/- | 7. | ಪ್ರಸಾದ ಸೇವಾ ಕಾಣಿಕೆ | ₹ 500/- |
| 4. | ಸಹಸ್ರಮೋದಕ ಹೋಮ ಸಂಕಲ್ಪ | ₹ 200/- | 8. | ಒಂದು ದಿನದ ಸರ್ವ ಸೇವೆ | ₹ 2500/- |
| 5. | ಒಂದು ದಿನದ ಉತ್ಸವ ಪೂಜೆ | ₹ 250/- | 9. | ರಥೋತ್ಸವ ಸೇವೆ | ₹ 2500/- |

ಮಂದಿರದ ಕಾಣಿಕೆಗಳನ್ನು ಆನ್‌ಲೈನ್ (online) ಮೂಲಕ ಹಣಪಾವತಿ ಮಾಡಲು ಇಚ್ಛಿಸುವವರು ಕೆಳಗಿನ ವಿವರಗಳಂತೆ ಪಾವತಿಸಿ ಸೇವಾ ವಿವರಗಳನ್ನು ಹಾಗೂ ನಗದು ಪಾವತಿಯ ವರ್ಗಾವಣೆ ರಶೀದಿಯನ್ನು (Transaction Details) ನಮೂದಿಸಿ ವಾಟ್ಸಾಪ್ (Whatsapp) ಮೂಲಕ **94487 33744**ಗೆ ಸಂದೇಶ ಕಳುಹಿಸಬೇಕಾಗಿ ವಿನಂತಿ.

**Bank Name :** State Bank of India
**Account No :** 54010112882
**IFSC Code :** SBIN0040199
**Name :** Sri Ganesha Mandiram

### ವಿಶೇಷ ಸೂಚನೆ

1. ಭಕ್ತಾದಿಗಳು ತಾ|| 04-09-2022ನೇ ಭಾನುವಾರ ಶ್ರೀ ಗಣೇಶ ಸಹಸ್ರಮೋದಕ ಹೋಮ ಕಾರ್ಯಕ್ಕೆ ಸಂಕಲ್ಪ ಮಾಡಿಕೊಳ್ಳಬಹುದು. ಹೋಮಕ್ಕೆ ಒಬ್ಬರಿಗೆ ರೂ. 200/- ಕೊಡಬೇಕಾಗುತ್ತದೆ. ತೆಂಗಿನಕಾಯಿ ಹೋಳು ಮತ್ತು ಹೋಮ ಪ್ರಸಾದವನ್ನು ಕೊಡಲಾಗುತ್ತದೆ.
2. ತಾ|| 06-09-2022ನೇ ಮಂಗಳವಾರ ಸಹಸ್ರನಾಮ ದೀಪಪೂಜೆಗೆ ಬರುವವರು ತಾವೇ ಪೂಜಾಸಾಮಗ್ರಿಗಳನ್ನು ತರಬೇಕು. (2 ತಟ್ಟೆ, ದೀಪ, ಬತ್ತಿ – ಅರಿಶಿನ, ಕುಂಕುಮ, ಪಂಚಪಾತ್ರ, ಉದ್ಧರಣೆ, ಸ್ವಲ್ಪ ಅಕ್ಕಿ, ಬಿಡಿ ಹೂ, ಗರಿಕೆ, ಕರ್ಪೂರ, ಊದುಬತ್ತಿ, ಗೆಜ್ಜೆವಸ್ತ್ರ, ಹಣ್ಣು, ತೆಂಗಿನಕಾಯಿ, ವೀಳ್ಯದೆಲೆ–ಅಡಿಕೆ ಇತ್ಯಾದಿ) ಎಣ್ಣೆ ಮಂದಿರದಲ್ಲಿ ಉಚಿತವಾಗಿ ಕೊಡಲಾಗುತ್ತದೆ.
3. ಈ ವರ್ಷ ಮಕ್ಕಳ ಸ್ಪರ್ಧೆ ಕಾರ್ಯಕ್ರಮಗಳನ್ನು ಎರಡು ದಿನ ನಡೆಸಲಾಗುತ್ತದೆ. ತಾ|| 01-09-2022ನೇ ಗುರುವಾರ ಗಣೇಶನ ಚಿತ್ರ ರಚನಾ ಸ್ಪರ್ಧೆ ಮತ್ತು ತಾ|| 02-09-2022ನೇ ಶುಕ್ರವಾರ ಸಣ್ಣ (1-5 ವರ್ಷ)ದ ಮಕ್ಕಳ ಮಾರು ವೇಷ ಸ್ಪರ್ಧೆ, ಮತ್ತು 1-15 ವರ್ಷದ ಮಕ್ಕಳಿಗೆ ಗಣೇಶನ ಶ್ಲೋಕ–ಸಂಗೀತ/ಭಕ್ತಿಗೀತೆ/ಜಾನಪದ ಗೀತೆಗಳ ಸ್ಪರ್ಧೆ. ವಿವರಗಳಿಗೆ ಕಾರ್ಯದರ್ಶಿಯವರನ್ನು ಸಂಪರ್ಕಿಸಿ 31-08-2022 ರ ಮುಂಚಿತವಾಗಿ ಅರ್ಜಿ ಸಲ್ಲಿಸಬೇಕು. ಅರ್ಜಿ ಮಂದಿರದಲ್ಲಿ ₹ 2/- ಪಾವತಿಸಿ ಪಡೆಯಬಹುದು.
4. ಪ್ರತಿದಿನ ಸಂಜೆ ಕಾರ್ಯಕ್ರಮಗಳು ಮುಗಿದ ನಂತರ ಪ್ರಸಾದ ವಿನಿಯೋಗವಿರುತ್ತದೆ.
5. ಪ್ರತಿದಿನ ಪ್ರಾತಃಕಾಲ ಮೂಲ ದೇವರಿಗೆ ಅಭಿಷೇಕ ಅರ್ಚನೆಗಳೂ ಸಂಜೆ ಅಲಂಕಾರಗಳನ್ನೂ ಏರ್ಪಡಿಸಲಾಗಿದೆ. ವಿವರಗಳಿಗೆ ಅರ್ಚಕರಲ್ಲಿ ವಿಚಾರಿಸಿ.
6. ನೀವು ಸಲ್ಲಿಸುವ ಪೂರ್ತಾ ಹಣಕ್ಕೆ ರಶೀದಿಯನ್ನು ಪಡೆಯಬೇಕಾಗಿ ಕೋರಿಕೆ.

**ಇವರೆಲ್ಲರಿಗೂ ಶ್ರೀ ವರಸಿದ್ಧಿ ವಿನಾಯಕ ಸ್ವಾಮಿಯು ಪೂರ್ಣಾನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.**

# ಎಲ್ಲರಿಗೂ ಸುಸ್ವಾಗತ

ಕೊಡುಗೆ : **ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್**, ಬೆಂಗಳೂರು – 70. ದೂ : 94480 51574 / 98455 82152